


ಮೇಷ್ಟ್ರು: ಯಾಕೋ ನಾಗೇಶ... ಇಷ್ಟು ಲೇಟಾಗಿ ಬರ್ತಾ ಇದ್ದೀಯಾ? ಇನ್ನೂ ತಿಂದು, ತೇಗಿ, ಮಲಗಿ ನಿಧಾನವಾಗಿ ಬರ್ಬೇಕಿತ್ತು.
ನಾಗೇಶ: ನಿನ್ನೆ ನೀವೆ ಹೇಳಿದ್ರಲ್ಲ ಸರ್... ನಿಧಾನವೇ ಪ್ರಧಾನ ಅಂತ!

***

ಸಚಿವ: ಮತದಾನ ಪವಿತ್ರ ಕರ್ತವ್ಯ. ದೇಶದ ಮೇಲೆ ಅಭಿಮಾನ ಇರುವವರು ಮತದಾನ ಮಾಡಿಯೇ ಮಾಡುತ್ತಾರೆ. ನಮ್ಮ ಸಂವಿಧಾನದ ಆಶಯದಂತೆ ಜಾತ್ಯತೀತ ರಾಷ್ಟ್ರದಲ್ಲಿ ಮತದಾನ ಗೋಪ್ಯತೆಯಿಂದ ಕೂಡಿದ್ದು, ಪಕ್ಷಾತೀತವಾಗಿ ಯಾವ ಪಕ್ಷಕ್ಕಾದರೂ ಮತದಾನ ಮಾಡಬಹುದು.
ಸಭಿಕ: ಪಕ್ಷಾತೀತವಾಗಿ ಅಂದ್ರೆ ಯಾವ ಪಕ್ಷಕ್ಕೂ ಮತಹಾಕುವಂತಿಲ್ಲ ಸರ್!

***

ಹೆಂಡತಿ: ರೀ... ಸಂಜೆ ಬರೋವಾಗ ಫೇರ್ ಅಂಡ್ ಲವ್ಲಿ, ಕೊಬ್ಬರಿ ಎಣ್ಣೆ, ಚಿಕ್ ಶಾಂಪೂ ತಗೊಂಡ್ ಬನ್ನಿ.
ನಡುವೆ ಬಾಯಿ ಹಾಕಿದ ಮಗ: 'ಪಪ್ಪಾ... ಚಿಕ್ ಶಾಂಪೂ ಬ್ಯಾಡ. ದೊಡ್ ಶಾಂಪೂ ತಗೊಂಡ್ ಬಾ'!
ಗಂಡ: ಆಯ್ತು ಕಂದ!

***

ಮೇಷ್ಟ್ರು: ಯಾಕೋ ನಾಗೇಶ? ಅಲ್ಲಲ್ಲಿ ಕಿತ್ತು ಹೋಗಿರುವ ಜೀನ್ಸ್ ಪ್ಯಾಂಟ್ ಹಾಕ್ಕೊಂಡ್ ಕ್ಲಾಸ್‌ಗೆ ಬಂದಿದ್ದೀಯಾ?
ನಾಗೇಶ: ಮೊನ್ನೆ ನೀವೇ ಹೇಳಿದ್ರಲ್ಲ ಸರ್... ಮೈಮೇಲೆ ಹರಿದ ಬಟ್ಟೆ ಇದ್ರೂ ಸರಿ, ಕೈಯಲ್ಲಿ ಪುಸ್ತಕ ಇರ್ಲಿ ಅಂತ. ಪುಸ್ತಕ ಮುಖ್ಯ. ಬಟ್ಟೆ ಅಲ್ಲ ಅಂತ ಅಂದ್ಕೊಂಡ್ ಪ್ಯಾಂಟ್ ಹಾಕ್ಕೊಂಡ್ ಬಂದಿದ್ದೀನಿ ಸರ್!

***

ಯಲ್ಲಪ್ಪ: ನಂಗೆ ತುಂಬ ಮರೆವು. ಒಳ್ಳೆ ಟ್ರೀಟ್‌ಮೆಂಟ್ ಕೊಡಿ ಡಾಕ್ಟ್ರೆ.
ಡಾಕ್ಟರ್: ತುಂಬ ಮರೆವಾ? ಹಾಗಾದ್ರೆ ಮೊದ್ಲು ನನ್ನ ಇನ್ನೂರು ರೂಪಾಯಿ ಫೀಸ್ ಕೊಟ್ಬಿಡಿ.
ಯಲ್ಲಪ್ಪ: ಸರಿ ಬಿಡಿ, ನಾನು ಹೊರಡ್ತೀನಿ.
ಡಾಕ್ಟರ್: ಯಾಕೆ?
ಯಲ್ಲಪ್ಪ: ನಿಮ್ಮ ಟ್ರೀಟ್‌ಮೆಂಟ್ ಬಗ್ಗೆ ನಿಮ್ಗೆ ನಂಬಿಕೆ ಇಲ್ಲ ಅಂದ್ರೆ ನಾನ್ಯಾಕೆ ಫೀಸ್ ಕೊಡ್ಲಿ?

***

ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೀರಿ, ಉತ್ತರ ಗೊತ್ತಿಲ್ಲ ಅಂತ ಯಾವ ಪ್ರಶ್ನೆನೂ ಖಾಲಿ ಬಿಡಬೇಡಿ, ನಂಬರ್ ಹಾಕಿ ಏನಾರ ಬರೀರಿ ಖಾಲಿ ಕೈಗಿಂತ ಕಬ್ಬಿಣದ ಕಡಗ ಲೇಸು ಅಂತೆಲ್ಲಾ ಮೇಷ್ಟ್ರು ತಿಳಿ ಹೇಳಿದ್ದರೂ ದಿಗಂತ ಕೊನೆಯ ಪ್ರಶ್ನೆನ ಖಾಲಿ ಬಿಟ್ಟಿದ್ದ.
ಮೇಷ್ಟ್ರು: ಯಾಕೋ ದಿಗಂತ ಕೊನೆ ಪ್ರಶ್ನೆ ಖಾಲಿ ಬಿಟ್ಟಿದ್ದೀಯಾ?
ದಿಗಂತ: ನೀವೇನೋ ಹೇಳಿದ್ರಿ ಸರ್. ಆದ್ರೆ ಕುವೆಂಪು ಅವರು ಏನೇಳವ್ರೆ?
ಮೇಷ್ಟ್ರು: ಏನೇಳವ್ರೆ?
ದಿಗಂತ: 'ಎಲ್ಲಿಯೂ ನಿಲ್ಲದಿರು, ಕೊನೆಯನೆಂದು ಮುಟ್ಟದಿರು' ಅಂತ ಹಂಗಾಗಿ ಕೊನೆ ಪ್ರಶ್ನೇನ ಮುಟ್ಟಿಲ್ಲ ಸರ್.

***

ಗುಂಡ: ಮಾಸ್ಕೋ ಎಲ್ಲಿದೆ?
ಅರೆ ಕಿವುಡ: 'ಕೊರೊನಾ ಬಂದಿದ್ರಿಂದ ಎಲ್ಲರ ಮೂತಿಗಳ ಮೇಲಿದೆ!

***

ನಂಜ: ಕಾಶ್ಮೀರಿ ಫೈಲ್ಸ್ ಬಗ್ಗೆ ಕೆಲವು ಬಸುಗುಡ್ತವ್ರಲ್ಲ?
ಮಂಜ: ಫೈಲ್ಸ್ ಬಾಧೆ ನಿಂಗೊತ್ತಿಲ್ಲ. ಅದರ ಬಾಧೆ ಅನುಭವಿಸಿದವ್ರಿಗೆ ಗೊತ್ತು. ಕುಂತಲ್ಲಿ ಕೂರಂಗಿಲ್ಲ, ನಿಂತಲ್ಲಿ ನಿಲ್ಲಂಗಿಲ್ಲ. ಫೈಲ್ಸ್ ಕಾಶ್ಮೀರಿ ಆದ್ರೂ, ಕರ್ನಾಟಕ ಆದ್ರೂ ಬಾಧೆ ಬಾಧೇನೆ!

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ

